

ಎಡದಿಂದ ಬಲಕ್ಕೆ
1. ಅತ್ತೆಯನ್ನು ಕರೆದರೆ ಆಕೆಯ ಮಗ ಬಂದ (3)
3. ಚಳವಳಿಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಬಹುಮಾನ ಈ ಬಟ್ಟೆ (3)
4. ಮಂದಾರ ಕುಸುಮವನ್ನು ಕೇಳಿದವ ಮನ್ಮಥ ತಾನೇ?(3)
6. ಅನ್ಯಾಯವನ್ನು ಮಾಡುವವನ ಜೊತೆಗೆ ಏನೀ ಸ್ನೇಹ? (4)
7. ಕೊಂಡುಕೊಳ್ಳಲು ಹೋದಾಗ ಕಂಡದ್ದೆಲ್ಲ ಹಾಗೂ ಸೊಟ್ಟ, ಹೀಗೂ ಸೊಟ್ಟ(4)
9. ಶಾಂತಚಿತ್ತರನ್ನು ನೀಚರನ್ನಾಗಿ ಮಾಡಲು ಬಂದ ನೋಡಿ, ರಾಕ್ಷಸ (4)
11. ಕಾವ್ಯಕ್ಕೆ ತಕ್ಕ ಅರ್ಥವನ್ನು ಕೇಳಿದ್ದಕ್ಕೆ ಭಾರೀ ತಬ್ಬಿಬ್ಬು (4)
15. ತಾಪತ್ರಯಕ್ಕೆ ಸಿಲುಕಿದವ ಒಬ್ಬ ಪೆದ್ದ (3)
16. ಸಾಧನೆಗೆ ತಕ್ಕಂತೆ ನಡೆದಿದೆ ತಯಾರಿ (3)
17. ನೆನ್ನೆಯ ತನಕ ಕೇಳಿಸುತ್ತಿತ್ತು ಕುದುರೆ ಕೂಗು (3)

ಮೇಲಿಂದ ಕೆಳಕ್ಕೆ
1. ತಳ್ಳು ಗಾಡಿಯಲ್ಲಿ ತುಂಬಿರುವುದೆಲ್ಲ ಬರೀ ಚಿಗುರು (3)
2. ಎಮ್ಮೆಗಳ ಗುಂಪಿನಲ್ಲಿ ಒಂದು ಸುಂದರ ಜೋಡಿ ನೋಡಿ (3)
3. ತಾಜಮಹಲಿನ ಬಗೆಗೆ ಎಲ್ಲರಿಗೂ ಇರಬೇಕು ಎಚ್ಚರಿಕೆ (3)
5. ಕಾಸನ್ನು ಹಂಚ ಹೊರಟಾಗ ಆಗಷ್ಟೇ ಬೆಳಕು ಹರಿದಿತ್ತು (3)
6. ಅನ್ಯಾಯವನ್ನಿನ್ನೂ ಎಷ್ಟು ಸಹಿಸಬಲ್ಲದು ಈ ಭೂಮಿ ? (3)
8. ಹಕ್ಕು ಪತ್ರ ಕೇಳಿದ್ದಕ್ಕೆ ವ್ಯಂಗ್ಯ ಮಾಡಬೇಕೇ ? (3)
10. ಚಿರತೆಗಳ ವಿಕಸನದ ಇತಿಹಾಸ (3)
12. ವಿಕ್ರಮನ ಕಥೆಯನ್ನೇ ಆಧರಿಸಿದ ಪದ್ಯ ಇದು (3)
13. ಚೆಲ್ಲಿದ ಕರ್ಪೂರವನ್ನೆಲ್ಲ ಒಟ್ಟು ಮಾಡಲಿಕ್ಕೆ ತಕ್ಕ ಸಾಧನ (3)
14. ಕಸ ಮಾರಿ ತಂದದ್ದನ್ನೂ ಕಿತ್ತುಕೊಳ್ಳುವುದೇ ? (3)

## 06 12 2018ರ ಸರಿ ಉತ್ತರಗಳು

ಎಡದಿಂದ ಬಲಕ್ಕೆ
1.ಸಾಮಯಿಕ 3. ವಿಪ್ಲವ 4. ಮಾರಕ 6.ಮತಿಹೀನ 7. ಸುರಾಸುರ 9.ಯಶೋಗಾನ 12. ಕರಾಮತಿ 14. ನನಸು 15. ಲಿಖಿಸು 16. ಮರೀಚಿಕೆ

ಮೇಲಿಂದ ಕೆಳಕ್ಕೆ
1. ಸಾವಧಾನ 2. ಕಮಾಯಿಸು 3. ವಿಶ್ರಾಂತಿ 5. ಕಡಸು 6. ಮಹನೀಯ 8. ರಣಭೀತಿ 10. ಶೋಧನ 11. ನವಸುಮ 12. ಕದ್ದಾಲಿಕೆ 13. ಮನ್ನಿಸು

ಪ್ರಶ್ನಾ ಂಕಣ

# ಅಂಟಾರ್ಕ್ಟಿಕಾದಲ್ಲಿ ಎಷ್ಟಿದೆ ಹಿಮ?

ಅಂಟಾರ್ಕ್ಟಿಕಾ ಅದೊಂದು ಭೂಖಂಡ (ಚಿತ್ರ1). ಉಳಿದೆಲ್ಲ ಭೂಖಂಡಗಳಿಂದ ಇದು ಬಹಳ ಭಿನ್ನ, ಬಹಳ ವಿಶಿಷ್ಟ. ಅದು ಅತ್ಯಂತ ಶೀತಲ ಭೂಖಂಡ; ಅದು ಹಿಮಹಾಸಿನಿಂದ ಶಾಶ್ವತ ಆವೃತ (ಚಿತ್ರ2); ಕೇವಲ ಸಂತಾನ ಜಾತ್ರೆಗೆಂದು ಬಂದು ಹೋಗುವ ಪೆಂಗ್ವಿನ್ ಹಕ್ಕಿಗಳನ್ನು ಬಿಟ್ಟರೆ (ಚಿತ್ರ3) ಅಲ್ಲಿ ಬೇರಾವ ಪ್ರಾಣಿಯೂ ನೆಲೆಸಿಲ್ಲ; ಕೆಲ ಶೈವಲ ಮತ್ತು ಶಿಲೀಂಧ್ರಗಳನ್ನು ಬಿಟ್ಟರೆ ಅಲ್ಲಿ ಬೇರಾವ ಸಸ್ಯವೂ ಬೆಳೆದಿಲ್ಲ; ಕೆಲವೇ ವಿಜ್ಞಾನಿಗಳನ್ನು ಬಿಟ್ಟರೆ ಅಲ್ಲಿ ಮಾನವರು ಇನ್ನಾರೂ ಇಲ್ಲ; ಈ ಭೂಖಂಡ ಯಾವ ರಾಷ್ಟ್ರಕ್ಕೂ ಸೇರಿಯೂ ಇಲ್ಲ!

ಸಂಪೂರ್ಣ ಹಿಮಲೋಕವಾಗಿರುವುದು ಅಂಟಾರ್ಕ್ಟಿಕಾದ ಪರಮ ವೈಶಿಷ್ಟ್ಯ. ಈ ಇಡೀ ಭೂಖಂಡವನ್ನು 14 ದಶಲಕ್ಷ ಚದರ ಕಿಲೋ ಮೀಟರ್ ವಿಸ್ತಾರದ ಒಂದೇ ಹಿಮಹಾಸು ಆವರಿಸಿದೆ. ಈ ಹಿಮ ಹಾಸಿನ ದಪ್ಪ ಸರಾಸರಿ ಎರಡೂವರೆ ಕಿಲೋ ಮೀಟರ್! ಹಾಗಾಗಿ ಅಂಟಾರ್ಕ್ಟಿಕಾದ ಹಿಮ ಸಂಗ್ರಹದ ಒಟ್ಟು ಗಾತ್ರ 30 ದಶಲಕ್ಷ ಘನ ಕಿಲೋ ಮೀಟರ್. ತೂಕದಲ್ಲಿ ಬೇಕೆಂದರೆ, ಈ ಹಿಮ ರಾಶಿಯ ಒಟ್ಟು ತೂಕ 26.5 ಗೀಗಾ ಟನ್ ( 1 ಗೀಗಾ ಟನ್ = 100 ಕೋಟಿ ಟನ್). ಧರೆಯಲ್ಲಿರುವ ಒಟ್ಟೂ ಶುದ್ಧ ಜಲದ ಶೇ.61 ಭಾಗ ಇದೊಂದೇ ಹಿಮ ಹಾಸಿನಲ್ಲೇ ಶೇಖರಗೊಂಡಿದೆ! ಈ ಹಿಮ ದಾಸ್ತಾನೆಲ್ಲ ಕರಗಿ ನೀರಾಗಿ ಕಡಲಿಗೆ ಬೆರೆತರೆ ಇಡೀ ಸಾಗರ ಸಾಮ್ರಾಜ್ಯದ ನೀರಿನ ಮಟ್ಟ 58 ಮೀಟರ್ (ಎಂದರೆ ಸಮೀಪ 180 ಅಡಿ) ಏರಿಬಿಡುತ್ತದೆ. ಹಾಗಾದಾಗ ಸ್ಪಷ್ಟವಾಗಿಯೇ ಇನ್ನೆಲ್ಲ ಭೂ ಖಂಡಗಳ ನೆಲದ ಬಹು ಭಾಗಗಳು ಸಾಗರಗಳಲ್ಲಿ ಸಮಾಧಿಗೊಳ್ಳುತ್ತವೆ!




ವಿಸ್ಮಯ ಏನೆಂದರೆ, ಅಂಟಾರ್ಕ್ಟಿಕಾವನ್ನು ಆವರಿಸಿರುವ ಹಿಮಹಾಸು ಮೈದಳೆಯತೊಡಗಿದ್ದು ಈಗ್ಗೆ 45.5 ದಶಲಕ್ಷ ವರ್ಷ ಹಿಂದೆ. ಆಗಿನ ಭೂ ವಾಯುಮಂಡಲದಲ್ಲಿ ಆಮ್ಲ ಜನಕ, ಮಿಥೇನ್ ಮತ್ತು ಇಂಗಾಲದ ಡೈ ಆಕ್ಸೈಡ್ ಅನಿಲಗಳ ಪ್ರಮಾಣಗಳು ತೀವ್ರ ಏಳುಬೀಳುಗಳನ್ನು ಕಂಡದ್ದರ ಪರಿಣಾಮವಾಗಿ ಆರಂಭಗೊಂಡ ಭಾರೀ ಹಿಮಪಾತದ ಹಿಮವೆಲ್ಲ ಅಲ್ಲೇ ಶೇಖರಗೊಂಡು, ಸಾಂದ್ರಗೊಂಡು ಈಗ್ಗೆ 34 ದಶಲಕ್ಷ ವರ್ಷ ಹಿಂದಿನ ಸುಮಾರಿಗೆ ಪ್ರಸ್ತುತದ ಹಿಮಹಾಸನ್ನು ರೂಪಿಸಿತು. ಆದರೆ ಸದ್ಯದ ತಾಪಮಾನ ಏರಿಕೆಯಿಂದಾಗಿ ಈ ಹಿಮಹಾಸು ಕರಗತೊಡಗಿದೆ. ಆದ್ದರಿಂದಲೇ ಅಂಟಾರ್ಕ್ಟಿಕಾದ ಅಂಚಿನಿಂದ ಹಡಗುಗಳಷ್ಟು ಬೃಹದಾಕಾರದ ಐಸ್ ಬರ್ಗ್‌ಗಳು (ಚಿತ್ರ4) ಆಗಾಗ ತುಂಡಾಗಿ, ಕಳಚಿ, ಕಡಲಿಗೆ ಇಳಿಯುತ್ತಿವೆ. ಕಳೆದ 25 ವರ್ಷಗಳಲ್ಲಿ ಸಮೀಪ 3 ಶತ ಕೋಟಿ ಟನ್‌ನಷ್ಟು ಹಿಮ ಕರಗಿ ಕಡಲನ್ನು ಸೇರಿದೆ!

■ ಎನ್. ವಾಸುದೇವ್